

ಕಾಡುಗಳ ಪಾಲಿಗೆ ಪ್ರತಿ ವರ್ಷದ ಬೇಸಿಗೆಯೂ ಮೃತ್ಯುಪ್ರಾಯವಾಗಿ ಕಾಡುತ್ತದೆ. ಹಸುರಿನಿಂದ ಕಂಗೊಳಿಸುವ ಕಾಡನ್ನು ಸೂರ್ಯ ಬೇಯಿಸುತ್ತಾನೆ, ಮನುಷ್ಯಸೃಷ್ಟಿಯ ಬೆಂಕಿಯೂ ಸುಟ್ಟು ಕರಕಲಾಗಿಸುತ್ತದೆ. ಈ ಇಬ್ಬಗೆಯ ಬೆಂಕಿ ಗಿಡಮರಗಳನ್ನಷ್ಟೇ ಸುಡುವುದಿಲ್ಲ; ಅಗಣಿತ ಜೀವರಾಶಿಯೂ ಕಾಳ್ಗಿಚ್ಚಿಗೆ ಸಿಕ್ಕಿ ಕರಕಲಾಗುತ್ತದೆ. ಕಾಳ್ಗಿಚ್ಚಿನಿಂದ ಉಂಟಾಗುವ ಅನಾಹುತ ಕಲ್ಪನೆಗೂ ಮೀರಿದ್ದು. ಒಂದು ಮರ ಬೆಳೆಸುವ ಕಷ್ಟ ಅರಿತವರು, ಬೆಂಕಿಯಲ್ಲಿ ಕಾಡು ಕರಗಿಹೋಗುವ ದಾರುಣತೆಯನ್ನು ಕಲ್ಪಿಸಿಕೊಳ್ಳಬಲ್ಲರು. ಕಾಳ್ಗಿಚ್ಚು ನೈಸರ್ಗಿಕವಾಗಿರುವಂತೆ, ಬಹುತೇಕ ಸಂದರ್ಭಗಳಲ್ಲಿ ಮನುಷ್ಯ ನಿರ್ಮಿತವೂ ಆಗಿರುತ್ತದೆ. ಕಾಳ್ಗಿಚ್ಚನ್ನು ನಿಯಂತ್ರಿಸುವ ಕಾರ್ಯಯೋಜನೆಗಳ ಜೊತೆಗೆ, ಮನುಷ್ಯನೊಳಗಣ ಕಿಚ್ಚಿಗೂ ಮದ್ದು ಹುಡುಕಬೇಕಾಗಿರುವುದು ಇಂದಿನ ಜರೂರು.

■ ಕೋಡಿಬೆಟ್ಟು ರಾಜಲಕ್ಷ್ಮಿ